## ಮಾಂಗಲ್ಯಂ ತಂತುನಾನೇನ ....

ತಾ.20-08-2008ನೇ ಬುಧವಾರ ಉಜ್ಜೋಡಿಯ ಶ್ರೀ ಯು. ಕೃಷ್ಣಪ್ರಸಾದರ ಪುತ್ರ **ಮಣೀಶ್ ರಾವ್ ಯು.** ಮತ್ತು ದಿ। ಜಯರಾಮ ಹೆಬ್ಬಾರರ ಪುತ್ರಿ **ಅಕ್ಷತಾ** ಇವರ ವಿವಾಹವು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ಜರಗಿತು.

□ □ □ □ □

ತಾ.17-08-2008ನೇ ರವಿವಾರ ಶ್ರೀ ಎಮ್. ದಯಾನಂದ ರಾಯರ ಪುತ್ರ **ಪ್ರಕಾಶ** ಮತ್ತು ಶ್ರೀಕೃಷ್ಣರಾಜ ರಾಯರ ಪುತ್ರಿ **ಮಾನಸ** ಇವರ ವಿವಾಹವು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ಜರಗಿತು.

□ □ □ □ □

ತಾ.04-09-2008ನೇ ಗುರುವಾರ ಅಂಬಲಪಾಡಿ ಶ್ರೀಮತಿ ಮಹಾಲಕ್ಷ್ಮೀ ಮತ್ತು ಶ್ರೀ ನಿತ್ಯಾನಂದ ಶ್ಯಾನುಭೋಗರ ಪುತ್ರ **ಕಿರಣ್** ಹಾಗೂ ಪಾಂಡೇಶ್ವರ ಶ್ರೀಮತಿ ಗಂಗಾವತಿ ಮತ್ತು ಶ್ರೀ ಪುರುಷೋತ್ತಮ ರಾವ್ ಇವರ ಪುತ್ರಿ **ಅನ್ನಪೂರ್ಣ** ಇವರ ವಿವಾಹವು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ಜರಗಿತು.

## ಶುಭ ಜನನ

ಬೆಂಗಳೂರಿನಲ್ಲಿರುವ ಹೊಸ್ಕೋಟೆ ಶ್ರೀ ವಿದ್ಯಾಧರ ಮತ್ತು ಶ್ರೀಮತಿ ರೂಪಾರಾಣಿ ಇವರಿಗೆ ತಾ.08-08-08 ರಂದು ಹೆಣ್ಣು ಮಗುವಿನ ಜನನ.

## ಗೃಹಪ್ರವೇಶ

ಶ್ರೀಮತಿ ಸಹನಾ ಮತ್ತು ಶ್ರೀ ಪವನ ಕುಮಾರ್ ಇವರು ಬೆಂಗಳೂರಿನ ಸಮೀಪ ಹೊಸೂರಿನ ಗೃಹ ಸಂಕೀರ್ಣದಲ್ಲಿ ನೂತನವಾಗಿ ನಿರ್ಮಿಸಿರುವ ''ಖುಷಿ''ಯ ಗೃಹ ಪ್ರವೇಶವನ್ನು ತಾ.04-08-2008ರಂದು ನೆರವೇರಿಸಿದರು.

□ □ □ □ □

ಶ್ರೀಮತಿ ಪೂರ್ಣಿಮಾ ಪಿ. ರಾವ್ ಮತ್ತು ಶ್ರೀ ಪ್ರಫುಲ್ಲಚಂದ್ರ ರಾವ್ ಉದ್ಯಾವರ ಇವರು ಉಡುಪಿಯ ಬೈಲಕೆರೆಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ ಸಂಕೀರ್ಣ ''ಪ್ರತೀಕ್'' ಇದರ ಗೃಹ ಪ್ರವೇಶವನ್ನು ತಾ.07-09-2008ರಂದು ನೆರವೇರಿಸಿದರು.

## ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| 16-09-2008 | ಕನ್ಯಾ ಸಂಕ್ರಮಣ |
| 18-09-2008 | ಸಂಕಷ್ಟ ಚತುರ್ಥೀ<br>ಚಂದ್ರೋದಯ ರಾತ್ರಿ ಗಂ.8.39ಕ್ಕೆ |
| 25-09-2008 | ಸರ್ವೈಕಾದಶೀ |
| 26-09-2008 | ಹಸ್ತಾ ನಕ್ಷತ್ರಾರಂಭ<br>ಪ್ರದೋಷಃ |
| 29-09-2008 | ಮಹಾಲಯ ಅಮಾವಾಸ್ಯೆ |
| 30-09-2008 | ನವರಾತ್ರಿ ಆರಂಭ |
| 04-10-2008 | ಲಲಿತ ಪಂಚಮಿ |
| 06-10-2008 | ಶಾರದಾ ಪೂಜಾರಂಭ |
| 08-10-2008 | ಮಹಾನವಮಿ |
| 09-10-2008 | ವಿಜಯದಶಮಿ |
| 10-10-2008 | ಚಿತ್ರಾ ನಕ್ಷತ್ರಾರಂಭ |
| 11-10-2008 | ಸರ್ವೈಕಾದಶೀ |
| 12-10-2008 | ಪ್ರದೋಷಃ |
| 14-10-2008 | ಪೂರ್ಣಿಮಾ |
| 16-10-2008 | ತುಲಾ ಸಂಕ್ರಮಣ, |

## ಅಭಿನಂದನೆ

### ಎಂ. ಸೌಮ್ಯ



ಕೋಟ ವಿವೇಕ ಪ್ರೌಢಶಾಲೆಯ ವಿದ್ಯಾರ್ಥಿನಿ ಎಂ. ಸೌಮ್ಯ 2007-2008 ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 598 (95.68%) ಅಂಕಗಳಿಸಿರುತ್ತಾಳೆ. ಈಕೆ ಬೈಂದೂರಿನಲ್ಲಿ ವಾಸ್ತವ್ಯವಿರುವ ಶ್ರೀ ಲೋಕೇಶ್ವರ ಮತ್ತು ಶ್ರೀಮತಿ ಸಂಧ್ಯಾ ಲೋಕೇಶ್ವರರವರ ಸುಪುತ್ರಿಯಾಗಿರುತ್ತಾಳೆ.

### ಪ್ರೊ। ಸಾಂತೂರು ಸುಬ್ರಹ್ಮಣ್ಯರಾವ್



ಪ್ರೊ। ಸಾಂತೂರು ಸುಬ್ರಹ್ಮಣ್ಯರಾಯರು ಉಡುಪಿ ತಾಲೂಕಿನ ಮುದರಂಗಡಿ ಸಮೀಪದ ಸಾಂತೂರು ಗ್ರಾಮದವರು. ಇವರು 1974ರಲ್ಲಿ ಸುರತ್ಕಲ್ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವಿಯನ್ನು ಪಡೆದು 1976ರಲ್ಲಿ ಅದರಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು.

1976 ರಿಂದ ಇವರು ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ಮತ್ತು ವಿಭಾಗ ಮುಖ್ಯಸ್ಥರಾಗಿ ಎಂ.ಐ.ಟಿ., ಮಣಿಪಾಲ್, ಕೆ.ಆರ್.ಇ.ಸಿ., ಸುರತ್ಕಲ್, ಅಂಜುಮಾನ್ ತಾಂತ್ರಿಕ ಶಿಕ್ಷಣ ಸಂಸ್ಥೆ ಭಟ್ಕಳ ಮುಂತಾದ ವಿವಿಧ ತಾಂತ್ರಿಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದರು. 2002ರಲ್ಲಿ ಇಂಗ್ಲೆಂಡಿನ ಗ್ಲಾಸ್ಗೊ ಕಲೆಡೋನಿಯನ್ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಯಾದ ಮಸ್ಕತಿನಲ್ಲಿರುವ ಕಲೆಡೋನಿಯನ್ ಸಿವಿಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆಗೆ ಸೇರಿಕೊಂಡರು.

ಪ್ರೊ। ಸುಬ್ರಹ್ಮಣ್ಯರಾಯರು ಭಾರತೀಯ ಇಂಜಿನಿಯರುಗಳ ಸಂಸ್ಥೆ, ಭಾರತೀಯ ತಾಂತ್ರಿಕ ಶಿಕ್ಷಣ ಸಂಸ್ಥೆ ಚಾರ್ಟರ್ಡ್ ಇಂಜಿನಿಯರುಗಳ ಸಂಸ್ಥೆಗಳ ಸಕ್ರಿಯ ಸದಸ್ಯರಾಗಿದ್ದಾರೆ. ಕಲೆಡೋನಿಯನ್ ಇಂಜಿನಿಯರಿಂಗ್ ಕಾಲೇಜಿನ ಶೈಕ್ಷಣಿಕ ಸಲಹಾ ಸಮಿತಿಗೆ ಓರ್ವ ಸದಸ್ಯರಾಗಿ ಎರಡುಬಾರಿ ಆಯ್ಕೆಯಾಗಿದ್ದಾರೆ. ಇಂಗ್ಲೆಂಡಿನ ಶ್ರೇಷ್ಠ ಮತ್ತು ಇತರ ಸಂಸ್ಥೆಗಳಲ್ಲಿ ಹೆಸರುವಾಸಿಯಾದ ಚಾರ್ಟರ್ಡ್ ಇನ್ಸ್ಟಿಟ್ಯೂಟ್ ಆಫ್ ಬಿಲ್ಡಿಂಗ್ (ಸಿ.ಐ.ಓ.ಬಿ) ಇದರ ಸದಸ್ಯರೂ ಆಗಿದ್ದಾರೆ.

ಇವರು ದೇಶ ಮತ್ತು ಪರದೇಶಗಳಲ್ಲಿ ನಡೆದ ಹಲವಾರು ಅಂತಾರಾಷ್ಟ್ರೀಯ ಸೆಮಿನಾರ್‌ಗಳಲ್ಲಿ ಭಾಗವಹಿಸಿದುದಲ್ಲದೆ, ಸೆಮಿನಾರ್‌ಗಳಲ್ಲಿ ಪ್ರೌಢ ತಾಂತ್ರಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. 2007ರ ಎಪ್ರಿಲ್‌ನಲ್ಲಿ ಇವರು ಇಂಗ್ಲೆಂಡಿನ ಗ್ಲಾಸ್ಗೊ ಕಲೆಡೋನಿಯನ್ ವಿಶ್ವವಿದ್ಯಾನಿಲಯದಲ್ಲಿ **"ಕಟ್ಟಡ ರಚನೆಯಲ್ಲಿ ಆಧುನಿಕ ತಂತ್ರಜ್ಞಾನ"**ದ ವಿಚಾರವಾಗಿ 2ವಾರಗಳ ವಿಶೇಷ ಉಪನ್ಯಾಸವನ್ನು ಇತ್ತಿದ್ದಾರೆ. ಒಮಾನ್‌ನಲ್ಲಿ ಕಲಿಯುತ್ತಿರುವ ಹಲವಾರು ತಾಂತ್ರಿಕ ಪದವಿ ವಿದ್ಯಾರ್ಥಿಗಳಿಗೆ ಪ್ರೊಜೆಕ್ಟ್ ತಯಾರಿಕೆಗೆ ಮಾರ್ಗದರ್ಶನ ನೀಡಿದ್ದಾರೆ.

ಪ್ರೊ। ಸಾಂತೂರು ಸುಬ್ರಹ್ಮಣ್ಯ ರಾಯರು ಮಾಡಿದ ಸಾಧನೆಗೆ ಮತ್ತು ಅವರು ನೀಡುತ್ತಿರುವ ಸೇವೆಗೆ ಅಭಿನಂದನೆಗಳು.

### ಡಾ। ವೈ. ರವೀಂದ್ರನಾಥ ರಾವ್



**ಪುಸ್ತಕ ಪ್ರಕಟಣೆ ಮತ್ತು ಸಂಶೋಧನಾ ಮಾರ್ಗದರ್ಶನ**

ಡಾ। ವೈ. ರವೀಂದ್ರನಾಥ ರಾವ್, ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಎಸ್.ಎಂ.ಎಸ್. ಕಾಲೇಜು ಬ್ರಹ್ಮಾವರ ಇವರು (ಸಹಲೇಖಕ ಡಾ। ದುಗ್ಗಪ್ಪ ಕಜೆಕಾರ್‌ರೊಂದಿಗೆ) ಬರೆದ "Research Methodology" ಪುಸ್ತಕ ಇತ್ತೀಚೆಗೆ ಮಂಗಳೂರು ಸೈಂಟ್ ಅಲೋಸಿಯಸ್ ಕಾಲೇಜಿನಲ್ಲಿ ನಡೆದ ಸಮಾಜಶಾಸ್ತ್ರ ಸಂಘದ ವಾರ್ಷಿಕ ಅಧಿವೇಶನದಲ್ಲಿ ಕಾಲೇಜಿನ ಪ್ರಾಂಶುಪಾಲರು, ರೆಕ್ಟರ್ ಮತ್ತು ನಾಗಾಲ್ಯಾಂಡ್ ಸೈಂಟ್ ಜೋಸೆಫ್ ಕಾಲೇಜಿನ ರೆಕ್ಟರ್ ಅವರ ಉಪಸ್ಥಿತಿಯಲ್ಲಿ ಪ್ರಕಟಗೊಂಡಿತು. ಮಂಗಳಾ ಪಬ್ಲಿಕೇಶನ್ಸ್, ಮಂಗಳೂರು ಸಮಾಜಶಾಸ್ತ್ರ ಸಂಘದ ಪರವಾಗಿ ಇದನ್ನು ಪ್ರಕಟಿಸಿದ್ದು, ಇದು ಮಂಗಳೂರು ವಿ.ವಿ. ಅಂತಿಮ ಬಿ.ಎ. ಸಮಾಜಶಾಸ್ತ್ರ 5ನೇ ಸೆಮಿಸ್ಟರ್‌ನ ಪಠ್ಯ ಪುಸ್ತಕವಾಗಿ ಮತ್ತು ಸಂಶೋಧನೆ, ಸಮೀಕ್ಷೆ, ಕ್ಷೇತ್ರಾಧ್ಯಯನ ಕೈಗೊಳ್ಳುವವರಿಗೂ ಇದೊಂದು ಉಪಯುಕ್ತ ಕೈಪಿಡಿಯಾಗಿ ಸಹಕಾರಿಯಾಗಬಲ್ಲದು. ಡಾ। ರಾವ್ ಬರೆದ ಅನೇಕ ಕೃತಿಗಳು, ಲೇಖನಗಳು, ಸಂಶೋಧನಾ ಪ್ರಬಂಧಗಳು ಈ ಹಿಂದೆ ಪ್ರಕಟಗೊಂಡಿವೆ. ಇವರ ಮಾರ್ಗದರ್ಶನದಲ್ಲಿ ಇತ್ತೀಚೆಗೆ ಇಬ್ಬರು ಅಭ್ಯರ್ಥಿಗಳು ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ತಮಿಳುನಾಡಿನ ಅಣ್ಣಾಮಲೈ ವಿ.ವಿ.ಯು. ಎಂ.ಫಿಲ್ ಪದವಿ ಪ್ರದಾನ ಮಾಡಿದೆ.

## ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತ್ತಿರುವ
**ಸಾಮೂಹಿಕ ಗಣಹೋಮವು**
ತಾ.18-09-2008ರಂದು ಮತ್ತು ಅಕ್ಟೋಬರ್ ತಿಂಗಳಲ್ಲಿ 18-10-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.
**- ಶ್ರೀಶಾರದಾ ದೇವಸ್ಥಾನ ವೇದಿಕೆ**

---

ಶ್ರೀಶಾರದಾ ದೇವಸ್ಥಾನದಲ್ಲಿ
ತಾ.11-10-2008ರ ಶನಿವಾರ
ಸಂಜೆ ಗಂಟೆ 5-30ರಿಂದ
**ಗಮಕವಾಚನ-ಪ್ರವಚನ**
ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**
ಸರ್ವರಿಗೂ ಆದರದ ಸ್ವಾಗತ
**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ನಿಧನ

**ಪಡುಬಿದ್ರಿ, ಕೆ. ಜಗದೀಶ ಶಾಸ್ತ್ರಿ**

ಪಡುಬಿದ್ರಿಯ ಕೆ. ಜಗದೀಶ ಶಾಸ್ತ್ರಿಯವರು ತಾ.27-08-2008ರಂದು ತಮ್ಮ 68ನೇ ವರ್ಷದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು, ಒಬ್ಬಳು ಪುತ್ರಿ ಮತ್ತು ಅಪಾರ ಬಂಧು-ಬಾಂಧವರನ್ನು ಅಗಲಿರುತ್ತಾರೆ.

□ □ □ □ □

**ಅಪ್ಪು ರಾವ್**

ನಂದಿಕೂರಿನ ಕಟೀಲು ಅಪ್ಪುರಾಯರು ತಾ.15-08-2008ರಂದು ತಮ್ಮ 82ನೇ ವರ್ಷದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಮೂವರು ಪುತ್ರರು ಮತ್ತು ಅಪಾರ ಬಂಧು-ಬಾಂಧವರನ್ನು ಅಗಲಿರುತ್ತಾರೆ.

□ □ □ □ □

**ಶ್ರೀಮತಿ ಜಯಲಕ್ಷ್ಮೀ ವಿ. ರಾವ್**

ಎರ್ಮಾಳಿನ ಶ್ರೀಮತಿ ಜಯಲಕ್ಷ್ಮೀ ವಿ. ರಾವ್‌ರವರು ತಾ.23-08-2008ರಂದು ತಮ್ಮ 69ನೇ ವರ್ಷದಲ್ಲಿ ನಿಧನ ಹೊಂದಿದರು. ಇವರು ಪತಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿರುತ್ತಾರೆ.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O)



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಉಡುಪಿ ವಿಶಿಷ್ಟ ರುಚಿಯುಳ್ಳ
**Rao's 'ಮಾತೃಛಾಯಾ'ರವರ**
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
:- ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
**ಭಾರತ್ ಸ್ಟೋರ್ಸ್**
**ರಥಬೀದಿ, ಉಡುಪಿ - 576 101. ಫೋನ್ : 2522444**